ಆ) ಅಮಾಯಕರ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೆ;

ಇ) ಎಷ್ಟು ಮಂದಿಯ ಮೇಲೆ ಕೇಸು ದಾಖಲಿಸಲಾಗಿದೆ;

ಈ) ನಿಜವಾದ ಅಮಾಯಕರನ್ನು ಗುರುತಿಸಿ ಅವರ ಮೇಲೆ ಹಾಕಿದ ಕೇಸನ್ನು ವಾಪಸು ಪಡೆಯಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಕುಂದಾಪುರ ವೃತ್ತದ ಸರಹದ್ದಿನಲ್ಲಿ 4 ಜನರ ಮೇಲೆ ಮೊಕದ್ದಮ್ಮೆ ದಾಖಲಿಸಲಾಗಿದೆ.

ಈ) ಅಪರಾಧಿಗಳು ಅಮಾಯಕರೆಂದು ಕರಡು ಬಂದಲ್ಲಿ, ಇಂಥಹವರ ವಿರುದ್ಧ ದಾಖಲಾಗಿರುವ ಮೊಕ್ಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ

2624 (3207) : ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ವಿಧಾನಸಭೇಯ ಚುನಾವಣೆಗೆ ಸ್ಪರ್ಧಿಸಿ ಸೋತ ಅಭ್ಯರ್ಥಿಗಳಲ್ಲಿ ಕೆಲವರು ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಾರದಿದ್ದರೆ, ಸಿ.ಬಿ.ಐ. ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ನಕಲಿ ಛಾಪಾ ಕಾಗದ ಪ್ರಕರಣ

2639 (3006) : ಶ್ರೀ ರವೀಂದ್ರನಾಥ ಎಸ್.ಎ. (ಮಾಯಕೊಂಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕಲಿ ಛಾಪಾ ಕಾಗದ ಹಗರಣ ತನಿಖೆಯು ವಿಳಂಬವಾಗುತ್ತಿರಲು ಕಾರಣಗಳೇನು;

ಆ) ಇದರ ವಿಚಾರಣೆಗೆ ಯಾರನ್ನು ನೇಮಕ ಮಾಡಲಾಗಿದೆ; ತನಿಖೆ ಯಾವ ಹಣತದಲ್ಲಿದೆ;

ಇ) ಈ ತನಿಖೆ ಕಾರ್ಯ ಕೈಗೊಳ್ಳಲು ಸಿಬ್ಬಂದಿಗಳ ಕೊರತೆ, ಅಗತ್ಯ ಸಲಕರಣೆಗಳ ಅಭಾವ ಕಾರಣವೇ;

ಈ) ತನಿಖೆ ಕಾರ್ಯಕ್ಕೆ ಯಾವಾಗ ವಿಚಾರಣಾಧಿಕಾರಿಯನ್ನು (ನ್ಯಾಯಾಧೀಶರು) ನೇಮಿಸಲಾಗುವುದು;

ಉ) ಇದರಿಂದ ವಿಚಾರಣೆಗೆ ಹಿನ್ನೆಡೆ ಉಂಟಾಗಿ ಇದು ಆರೋಪಿಗಳಿಗೆ ಪರವಲ್ಲವೇ;

ಊ) ತನಿಖೆ ಕಾರ್ಯವನ್ನು ಯಾವಾಗ ಕೈಗೆತ್ತಿಕೊಂಡು ವಿಚಾರಣೆ ಪೂರ್ಣ ಗೊಳಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ತನಿಖೆಯಲ್ಲಿ ವಿಳಂಬವಾಗಿರುವುದಿಲ್ಲ.

ಆ) ಈ ಪ್ರಕರಣಗಳ ತನಿಖೆಗಾಗಿ ಶ್ರೀ ಆರ್. ಶ್ರೀಕುಮಾರ್, ಅವರ ಪೊಲೀಸ್

ಮಹಾನಿರ್ದೇಶಕರು: ಇವರ ನೇತೃತ್ವದಲ್ಲಿ ಸ್ಟಾಂಪ್ ಇನ್‌ವೆಸ್ಟಿಗೇಷನ್ ಟೀಮ್ ಎಂಬ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.

ಸ್ಟಾಂಪಿಟ್ ಮೂರು ಪ್ರಕರಣಗಳಲ್ಲಿ ತನಿಖೆ ನಡೆಸುತ್ತಿದೆ. ಈ ಮೂರು ಪ್ರಕರಣಗಳಲ್ಲಿ 9 ದೋಷಾ ರೋಪಣಾ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ವಿಚಾರಣೆ ಬಾಕಿ ಇರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಅಪರಾಧ ದಂಡ ಪ್ರಕ್ರಿಯೆ ಕಲಂ 173 (8)ರ ಅಡಿಯಲ್ಲಿ ತನಿಖೆಯನ್ನು ಮುಂದುವರೆಸಲಾಗಿದೆ.

11 ಜಿಲ್ಲೆಗೆ ಸಂಬಂಧಿಸಿದ ಇತರೆ 11 ಪ್ರಕರಣಗಳನ್ನು ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. ಇದರಲ್ಲಿ ಒಂದು ಪ್ರಕರಣವು ಖುಲಾಸೆಯಲ್ಲಿ ಅಂತ್ಯಗೊಂಡಿರುತ್ತದೆ, 8 ಪ್ರಕರಣಗಳಲ್ಲಿ ವಿಚಾರಣೆ ಬಾಕಿ ಇರುತ್ತದೆ, 2 ಪ್ರಕರಣಗಳು ತನಿಖೆಯಲ್ಲಿರುತ್ತವೆ.

ಇ) ಇಲ್ಲ

ಈ) ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ ಮತ್ತು ವಿಚಾರಣೆ ಪ್ರಾರಂಭಿಸಲು ಒಬ್ಬ ವಿಶೇಷ ನ್ಯಾಯಾಧೀಶರನ್ನು ನಾಮ ನಿರ್ದೇಶಿಸಲು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಕೋರಲಾಗಿದೆ.

ಉ) ಇಲ್ಲ, ಉದ್ಭವಿಸುವುದಿಲ್ಲ.

ಊ) ಮೇಲಿನ ಈ ಅಂಕಣದಲ್ಲಿ ನೀಡಿರುವ ಉತ್ತರವನ್ನು ನೋಡಿ.

ವಿವಿಧ ನ್ಯಾಯಾಲಯಗಳಲ್ಲಿ 11 ಪ್ರಕರಣಗಳು ಈಗಾಗಲೇ ವಿಚಾರಣಾ ಬಾಕಿ ಹಂತದಲ್ಲಿರುತ್ತವೆ.

ಅಧಿಕಾರಿಗಳು ಜನಪ್ರತಿನಿಧಿಗಳ ಜೊತೆ ಅನುಚಿತವಾಗಿ ವರ್ತಿಸಿರುವುದು

2650 (2765) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಅಧಿಕಾರಿಗಳು ಜನಪ್ರತಿನಿಧಿಗಳೊಂದಿಗೆ ಅನುಚಿತವಾಗಿ ವರ್ತಿಸಿದರೆಂದು ಸಂಸತ್ ಸದಸ್ಯರು, ಶಾಸಕರು, ಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಗಳು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ದೂರುಗಳ ಸ್ವರೂಪ ಏನು; ಯಾವ ದಿನಾಂಕಗಳಂದು ದೂರು ನೀಡಿರುವರು; ವಿವರ ನೀಡುವುದು;

ಇ) ಜನಪ್ರತಿನಿಧಿಗಳು ದೂರು ನೀಡಿದ ದಿನಾಂಕದಿಂದ ಇಂದಿನವರೆಗೆ ಸರ್ಕಾರವು ಕೈಗೊಂಡ ಕ್ರಮವೇನು;

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು):

ಅ) ಹೌದು

ಆ) 1. ಭಟ್ಕಳ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿದ್ದ ಶ್ರೀ ಶಂಕರ ಖಾರ್ವಿಯವರು ಸ್ಥಳೀಯ ಶಾಸಕರೊಡನೆ ಸೌಜನ್ಯದಿಂದ ಮಾತನಾಡದಿರುವುದಾಗಿ ದಿನಾಂಕ: 5.12.2001ರ ಪತ್ರದಲ್ಲಿ ಆಪಾದಿಸಿದೆ.